**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **444(528)** |
| 2) | ಮಾನ್ಯ ಸದಸ್ಯರ ಹೆಸರು | **ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| 3) | ಉತ್ತರಿಸಬೇಕಾದ ದಿನಾಂಕ | **21-02-2022** |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕೌಶಲ್ಯಾಭಿವೃದ್ಧಿ ಇಲಾಖೆಯು ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಫಲಾಪೇಕ್ಷಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡಗಳು ಯಾವುವು; (ಸಂಪೂರ್ಣ ವಿವರ ನೀಡುವುದು) | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೌಶಲ್ಯ ಮಿಷನ್)</u>**<br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯನ್ನು ಹಾಗೂ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಯುವ ಜನತೆಗೆ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.<br><br>ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ನಿಗಧಿಪಡಿಸಲಾಗಿರುವ ಮಾರ್ಗಸೂಚಿಗಳನ್ವಯ ರಾಜ್ಯದಾದ್ಯಂತ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳನ್ನು ಜಾರಿಗೊಳಿಸಲಾಗಿರುತ್ತದೆ. ಅದರಂತೆ ಸದರಿ ಯೋಜನೆಗಳಡಿ ಕನಿಷ್ಠ ವಯೋಮಾನವನ್ನು 18 ರಿಂದ 35 ವರ್ಷಗಳನ್ನು ನಿಗಧಿಪಡಿಸಲಾಗಿದ್ದು, ಅನಕ್ಷರಸ್ಥರನ್ನು ಒಳಗೊಂಡಂತೆ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಸಹ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದು ಜೀವನ ನಡೆಸಲು ಶಕ್ತರಾಗುವಂತೆ ಉದ್ಯೋಗಾವಕಾಶ ಹಾಗೂ ಉದ್ಯಮಶೀಲತೆಗೆ ಅವಕಾಶವನ್ನು ಕಲ್ಪಿಸುವ ಮೂಲಕ ಹಾಗೂ ಸದರಿ ತರಬೇತಿದಾರರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಲಾಗಿದೆ.<br><br>**<u>ಡೇ-ನಲ್ಮ್</u>**<br>ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ನಲ್ಮ್ ಅಭಿಯಾನದಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:-**<br><br>ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಸ್ವ-ಸಹಾಯ ಸಂಘಗಳಿಗೆ ರೂ.10,000/- ಮತ್ತು ಒಕ್ಕೂಟಗಳಿಗೆ ರೂ.50,000/- ಆವರ್ತಕ ನಿಧಿ ವಿತರಣೆ ಹಾಗೂ ಸಂಘ ಮತ್ತು ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.<br><br>**2) ಸ್ವಯಂ ಉದ್ಯೋಗ ಕಾರ್ಯಕ್ರಮ:-**<br><br>ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು. |

| | |
|---|---|
| | **3) ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:**<br>ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಾಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುವುದು.<br><br>**4)ನಗರದ ವಸತಿ ರಹಿತರಿಗೆ ಆಶ್ರಯ:**<br>ಸದರಿ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುವುದು.<br><br>**5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:**<br>ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.<br><br>**6)ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:**<br>ಸದರಿ ಉಪಘಟಕದಡಿ ಅಭಿಯಾನವನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ/ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.<br><br>**ಫಲಾಪೇಕ್ಷಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡಗಳು:**<br>1. ನಗರದ ವ್ಯಾಪ್ತಿಯ ಅರ್ಹ ಬಡ ಫಲಾನುಭವಿಗಳಾಗಿರಬೇಕು.<br>2. ಫಲಾನುಭವಿಗಳ ಕುಟುಂಬದ ವಾರ್ಷಿಕ ಆದಾಯ ರೂ.1.20 ಲಕ್ಷದ ಒಳಗಿರಬೇಕು.<br>3. ಈ ಕೆಳಕಂಡ ದಾಖಲಾತಿಗಳನ್ನು ಪರಿಗಣಿಸಲಾಗುವುದು.<br>• ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳೆಂದು ಗುರುತಿಸಲು ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್.<br>4. ಕೌಶಲ್ಯ ತರಬೇತಿಗೆ 16 ರಿಂದ 45 ವರ್ಷ ವಯೋಮಾನ ಒಳಗಿರಬೇಕು ಹಾಗೂ ಕೇಂದ್ರ ಸರ್ಕಾರವು ತರಬೇತಿ ವಿಷಯವಾರು ನಿಗಧಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.<br><br>**<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)</u>**<br><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ–ಕೆಎಸ್ಆರ್ಎಲ್‌ಪಿಎಸ್ ಮೂಲಕ ಪ್ರಮುಖವಾಗಿ ಗ್ರಾಮೀಣ ಮಹಿಳಾ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವ ಉದ್ದೇಶದಿಂದ ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮುಂದುವರೆದು, ಸ್ವಸಹಾಯ ಗುಂಪುಗಳ ಸದಸ್ಯರು ಉತ್ಪಾದಿಸುತ್ತಿರುವ ಉತ್ಪನ್ನಗಳಿಗೆ ವಿವಿಧ ಮಾರುಕಟ್ಟೆ ಸೌಲಭ್ಯಗಳನ್ನು ಒದಗಿಸುವುದು ಸೇರಿದಂತೆ ಒಂದಕ್ಕಿಂತ ಹೆಚ್ಚಿನ ಜೀವನೋಪಾಯ ಚಟುವಟಿಕೆ ಒದುಗಿಸುವುದಕ್ಕಾಗಿ ನರೇಗಾ ಮತ್ತು ವಿವಿಧ ಇಲಾಖೆಗಳ ಸೌಲಭ್ಯಗಳನ್ನು ಒಗ್ಗೂಡಿಸುವಿಕೆ ಪರಿಕಲ್ಪನೆಯಡಿ ಒದಗಿಸಲಾಗುತ್ತಿದೆ.<br><br>**1. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ**<br><br>ಅ. **ಸಾಮಾಜಿಕ ಸೇರ್ಪಡೆ ಮತ್ತು ಕ್ರೋಡೀಕರಣ:** ಎನ್ ಆರ್ ಎಲ್ ಎಂ ನ ಪ್ರಕಾರ ಗ್ರಾಮೀಣ ಭಾಗದ ಎಲ್ಲಾ ಬಡಕುಟುಂಬದಿಂದ ಒಬ್ಬ ಮಹಿಳೆಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ ವ್ಯಾಪ್ತಿಗೆ ತರುವುದು ಕಡ್ಡಾಯವಾಗಿದೆ. ಈ ಯೋಜನೆಯಡಿ ಮಹಿಳೆಯರಿಗೆ ಜೀವನೋಪಾಯ ಚಟುವಟಿಕೆ/ಉದ್ಯೋಗಾವಕಾಶವನ್ನು ಒದಗಿಸುವಲ್ಲಿ ಪ್ರಮುಖವಾಗಿ ಅವರು ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆದಿರಬೇಕು. ಸದರಿ ಸ್ವಸಹಾಯ ಗುಂಪುಗಳು ವಾರ್ಡ್ ಮತ್ತು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ವ್ಯಾಪ್ತಿಗೆ ಸೇರಿರಬೇಕು.<br><br>**ಆ. ಸ್ವಸಹಾಯ ಗುಂಪುಗಳ ತರಬೇತಿ:** ಸ್ವಸಹಾಯ ಗುಂಪುಗಳಿಗೆ ಪಂಚಸೂತ್ರಗಳ ಪಾಲನೆ, ಬ್ಯಾಂಕ್ ಸಂಪರ್ಕ, ಜೀವನೋಪಾಯ ಚಟುವಟಿಕೆಗಳು, ವಾರ್ಷಿಕ ಲೆಕ್ಕ ಪರಿಶೋಧನೆ ಇನ್ನೂ ಮುಂತಾದ ತರಬೇತಿಗಳನ್ನು ನೀಡುವುದರ ಮೂಲಕ ಗುಂಪುಗಳನ್ನು ಸುಸ್ಥಿರವಾಗಿಸಲು ಕ್ರಮವಹಿಸುವುದಾಗಿದೆ. ಇವುಗಳನ್ನು ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ಮಾಡಲಾಗುವುದು. |

| | |
|---|---|
| | **ಆರ್ಥಿಕ ಸೇರ್ಪಡೆ** : ಸ್ವಸಹಾಯ ಗುಂಪುಗಳ ಈ ಕೆಳಕಂಡ ಮೂಲಗಳಿಂದ ಅನುದಾನದ ಸೌಲಭ್ಯವನ್ನು ಪಡೆಯಬಹುದಾಗಿದೆ.<br><br>• **ಸುತ್ತುನಿಧಿ** : ಹೊಸ ಮತ್ತು ಬ್ಯಾಂಕ್ ಸಾಲ ಪಡೆಯದ ಸ್ವಸಹಾಯ ಗುಂಪುಗಳಿಗೆ, ಬ್ಯಾಂಕ್ ಸಾಲ ಪಡೆಯಲು ಅನುವಾಗುವಂತೆ ಮತ್ತು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಅರ್ಹ ಗುಂಪುಗಳನ್ನು ಗುರುತಿಸಿ, ಶ್ರೇಣೀಕರಣ ಮಾಡಿ ಗರಿಷ್ಠ ರೂ.15000/– ಗಳನ್ನು ಅನುದಾನದ ರೂಪದಲ್ಲಿ ಒದಗಿಸುವುದು.<br>1. **ಸುತ್ತುನಿಧಿ ವಿತರಿಸಲು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ**<br>• ಮಹಿಳಾ ಸ್ವ-ಸಹಾಯ **ಗುಂಪುಗಳು ಕನಿಷ್ಠ 5 (ಬಿಪಿಎಲ್) ಬಡ ವರ್ಗದ ಸದಸ್ಯರನ್ನು ಒಳಗೊಂಡಿರಬೇಕು.**<br>• <u>ಬಡವರ್ಗದ ಸದಸ್ಯರೆಂದರೆ:</u><br>• ಆರ್‌ಎಸ್‌ಬಿವೈ ಕಾರ್ಡ್ ಹೊಂದಿರುವವರು.<br>• ಎ ಎ ವೈ / ಬಿಪಿಎಲ್ ಪಡಿತರ ಚೀಟಿ ಹೊಂದಿರುವವರು<br>• 2011 ಎಸ್‌ಇಸಿಸಿ ಸರ್ವೆಯಲ್ಲಿ ಸ್ವಯಂ ಸೇರ್ಪಡೆ(Auto Inclusion) ವ್ಯಾಪ್ತಿಗೆ ಬರುವವರು<br>• ಕಳೆದ ಆರ್ಥಿಕ ವರ್ಷದಲ್ಲಿ ಎಮ್‌ಜಿಎನ್‌ಆರ್‌ಇಜಿಎ ಅಡಿಯಲ್ಲಿ 15 ದಿನ ಉದ್ಯೋಗ ಪೂರೈಸಿದ ಸದಸ್ಯರನ್ನು ಹೊಂದಿರುವ ಕುಟುಂಬದ ಮಹಿಳೆಯರು.<br>  • ಸ್ವ ಸಹಾಯ ಗುಂಪು 'ಎ' ಮತ್ತು 'ಬಿ' ಶ್ರೇಣಿ ಪಡೆದಿರಬೇಕು.<br>  • ಪಂಚಸೂತ್ರಗಳನ್ನು ಕಡ್ಡಾಯವಾಗಿ ಅನುಸರಣೆ ಮಾಡುತ್ತಿರುವ ಗುಂಪುಗಳಾಗಿರಬೇಕು.<br>  • ಈ ಹಿಂದೆ ಯಾವುದೇ ಸರ್ಕಾರಿ ಯೋಜನೆ/ಎಸ್‌ಜಿಎಸ್‌ವೈ ಯೋಜನೆಯಿಂದ ಸುತ್ತುನಿಧಿ ಪಡೆದಿರುವ ಗುಂಪುಗಳಿಗೆ ನೀಡುವಂತಿಲ್ಲ.<br><br>ಇ. **ಸಮುದಾಯ ಬಂಡವಾಳ ನಿಧಿ:** (ಸಿ.ಐ.ಎಫ್) ಒಕ್ಕೂಟಗಳ ಸುಸ್ಥಿರತೆಯನ್ನು ಬೆಂಬಲಿಸಲು ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುವುದು. ಸಮುದಾಯ ಬಂಡವಾಳ ನಿಧಿಯನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ರೂ.1,25,000 ಹಾಗೂ ಇತರೆ ಗುಂಪುಗಳಿಗೆ ರೂ.75,000/–ಗಳನ್ನು ನೀಡಲಾಗುತ್ತಿದೆ.<br><br>• ಎಸ್.ಎಚ್.ಜಿಗಳು ವಾರ್ಡ್ ಮಟ್ಟದ ಒಕ್ಕೂಟದಲ್ಲಿ ಸದಸ್ಯರಾಗಿರಬೇಕು.<br>• ಎಸ್.ಎಚ್.ಜಿಗಳು ಆರಂಭಗೊಂಡು ಕನಿಷ್ಠ 6 ತಿಂಗಳನ್ನು ಪೂರೈಸಿರಬೇಕು ಹಾಗೂ ಗುಂಪಿನ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕಾಗಿರುತ್ತದೆ.<br>• ಪಂಚಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸುತ್ತಿರಬೇಕು.<br>• ಶ್ರೇಣಿಕರಣದಲ್ಲಿ "ಎ" ಮತ್ತು "ಬಿ" ಶ್ರೇಣಿ ಪಡೆದಿರಬೇಕು.<br>• ಕಿರು ಬಂಡವಾಳ ಹೂಡಿಕೆ (ಎಮ್‌ಐಪಿ) ಯೋಜನೆಯು ಜಿ.ಪಿ.ಎಲ್.ಎಫ್ ಉಪ ಸಮಿತಿಯಿಂದ ಪರಿಶೀಲನೆಗೊಂಡಿರಬೇಕು.<br>• ನಂತರ ಎಮ್‌ಐಪಿಯು ಜಿ.ಪಿ.ಎಲ್.ಎಫ್ ಇ.ಸಿ ಸಮಿತಿಯ ಅನುಮೋದನೆ ಪಡೆದಿರಬೇಕು.<br>• ಉಪಸಮಿತಿಯಿಂದ ಪರಿಶೀಲನೆಗೊಂಡು ಅನುಮೋದನೆ ಪಡೆದ /ಕ್ರಮವಾಗಿರುವ ಬಗ್ಗೆ ಧೃಡಪಡಿಸಿಕೊಂಡ ನಂತರ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು.<br>• ಸಂಜೀವಿನಿ ಸಂಸ್ಥೆಯ 4ನೇ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿದಂತೆ ಕನಿಷ್ಠ 5 ಬಡವರ್ಗದ ಸದಸ್ಯರನ್ನು ಹೊಂದಿರಬೇಕು.<br>• ಏಳು ಹಂತಗಳ ಕಿರು ಬಂಡವಾಳ ಹೂಡಿಕೆ ಯೋಜನೆಯನ್ನು ತಯಾರಿಸಿರಬೇಕು.<br>• **ಸ್ವಸಹಾಯ ಗುಂಪುಗಳ ಬ್ಯಾಂಕ್ ಲಿಂಕೇಜ್** : ಸುತ್ತು ನಿಧಿ, ಸಮುದಾಯ ಬಂಡವಾಳ ನಿಧಿ ಮತ್ತು ಬ್ಯಾಂಕ್ ಲಿಂಕೇಜ್ Undefined ಅನುದಾನದ ಬೆಂಬಲವನ್ನು ನೀಡುವ ಮೂಲಕ ಬಡಜನರ ಆರ್ಥಿಕ ಭದ್ರತೆ/ಸುರಕ್ಷತೆಯನ್ನು ಉತ್ತೇಜಿಸುವುದಾಗಿದೆ. |

**ಬಡ್ಡಿ ಸಹಾಯಧನ:** ಎನ್‌ಆರ್‌ಎಲ್‌ಎಂ ಬಡ್ಡಿ ಸಹಾಯಧನ ಅಡಿಯಲ್ಲಿ ರೂ.3 ಲಕ್ಷದ ವರೆಗೆ ಸಾಲ ಪಡೆಯುವ ಬಿಪಿಎಲ್ ಸ್ವ ಸಹಾಯ ಗುಂಪುಗಳ ಸದಸ್ಯರುಗಳಿಗೆ ವಾರ್ಷಿಕ ಶೇ.7ರ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು.

2. **ದೀನ ದಯಾಳ ಉಪಾದ್ಯಾಯ ಗ್ರಾಮೀಣ ಕೌಶಲ್ಯ ಯೊಜನೆಯ–ಡಿಡಿಯುಜಿಕೆವೈ:**

ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು(60:40) ರಾಜ್ಯದಲ್ಲಿ 2013–14ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ 18 ರಿಂದ 35 ವಯೋಮಾನದ ಗ್ರಾಮೀಣ ಯುವಕ ಯುವತಿಯರನ್ನು ಗುರುತಿಸಿ ಅವರುಗಳ ವಿದ್ಯಾರ್ಹತೆಗನುಗುಣವಾಗಿ (8ನೇ ತರಗತಿ ಮೇಲ್ಪಟ್ಟು) ಕಂಪ್ಯೂಟರ್, ಹಾಸ್ಪಿಟಾಲಿಟಿ, ಡೇಟಾಎಂಟ್ರಿ, ಪ್ರವಾಸೋದ್ಯಮ, ಮೆಕಾನಿಕ್, ನರ್ಸಿಂಗ್, ಸೆಕ್ಯೂರಿಟಿ ಸರ್ವಿಸಸ್, ಟೈಲರಿಂಗ್ ಇತ್ಯಾದಿಯಾಗಿ ವಿವಿಧ ಕ್ಷೇತ್ರಗಳಲ್ಲಿ ಕನಿಷ್ಠ 3 ತಿಂಗಳುಗಳಿಂದ ಒಂದು ವರ್ಷದವರೆಗೆ ಉಚಿತ ವಸತಿಯೊಂದಿಗಿನ ಶ್ರೇಷ್ಠ ಗುಣಮಟ್ಟದ ಕೌಶಲ್ಯ ತರಬೇತಿ ನೀಡಿ ಕಡ್ಡಾಯವಾಗಿ ಉದ್ಯೋಗ ಒದಗಿಸುವ ಏಕೈಕ ಯೋಜನೆಯಾಗಿದೆ.

ಈ ಕೆಳಗಿನ ಮಾನದಂಡಗಳನ್ನು ಹೊಂದಿರಬೇಕು.

- ಗ್ರಾಮೀಣ ಪ್ರದೇಶದ ಯುವಕ/ಯುವತಿಯರಾಗಿರಬೇಕು
- 18 ರಿಂದ 35 ವಯೋಮಾನದವರಾಗಿರಬೇಕು,
- ಕನಿಷ್ಠ 5ನೇ ತರಗತಿಯವರೆಗೆ ಓದಿರಬೇಕು.
- ಬಿ.ಪಿ.ಎಲ್ ಕಾರ್ಡ್ ಹೊಂದಿರಬೇಕು.

3. **ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ:** ಸದರಿ ತರಬೇತಿಯ ಸಂಸ್ಥೆಯ ಮೂಲಕ ಗ್ರಾಮೀಣ ನಿರುದ್ಯೋಗ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ತರಬೇತಿಯಲ್ಲಿ ಸ್ವ–ಉದ್ಯೋಗ ಕೈಗೊಳ್ಳಬೇಕಾಗಿರುವ ಅಗತ್ಯ ಮಾಹಿತಿ, ಯೋಜನಾ ವರದಿ, ಮಾರ್ಕೆಟ್ ಆಯ್ಕೆ ಸಂಬಂಧಿಸಿದಂತೆ ತರಬೇತಿಯನ್ನು ನೀಡಲಾಗುತ್ತಿದೆ. ತರಬೇತಿಯ ಸಂದರ್ಭದಲ್ಲಿ ಶೀಭಿರಾರ್ಥಿಗಳಿಗೆ ಸಮವಸ್ತ್ರ ನೀಡಲಾಗುತ್ತದೆ.

ಈ ಕೇಳಗಿನ ಮಾನದಂಡಗಳನ್ನು ಹೊಂದಿರಬೇಕು,

- ಗ್ರಾಮೀಣ ಪ್ರದೇಶದ ಯುವಕ/ಯುವತಿಯರಾಗಿರಬೇಕು,
- 18 ರಿಂದ 45 ವಯೋಮಾನದವರಾಗಿರಬೇಕು,
- ಕನಿಷ್ಠ 7ನೇ ತರಗತಿವರಿಗೆ ಓದಿರಬೇಕು,
- ಆಧಾರ ಕಾರ್ಡ ಮತ್ತು ಬಿ.ಪಿ.ಎಲ್ ಕಾರ್ಡ್ ಹೊಂದಿರಬೇಕು.

4. **ಉನ್ನತಿ ಕೌಶಲ್ಯ ಯೋಜನೆ:** ಸದರಿ ಯೋಜನೆಯ ತರಬೇತಿಯನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2018–19 ರಲ್ಲಿ ಒಂದು ನೂರ ದಿನ ಕೆಲಸವನ್ನು ನಿರ್ವಹಿಸಿದ ಕುಟುಂಬದ ಒಬ್ಬ ಸದಸ್ಯರಿಗೆ, ಎಸ್.ಬಿ.ಆಯ್– ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೊಜನೆ ಮತ್ತು ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಸ್ವ–ಉದ್ಯೋಗ ತರಬೇತಿಯನ್ನು ನೀಡಲಾಗುತ್ತದೆ. ಸದರಿ ತರಬೇತಿಯನ್ನು ಪಡೆದ ಅಭ್ಯರ್ಥಿಗಳಿಗೆ ಪ್ರತಿ ದಿನಕ್ಕೆ ರೂ: 289/– ಶಿಷ್ಯವೇತನವನ್ನು ನೀಡಲಾಗುತ್ತದೆ ಹಾಗೂ ತರಬೇತಿಯ ಸಂದರ್ಭದಲ್ಲಿ ಸಮವಸ್ತ್ರ ನೀಡಲಾಗುತ್ತದೆ.

| | |
|---|---|
| | **ಈ ಕೆಳಗಿನ ಮಾನದಂಡಗಳನ್ನು ಹೊಂದಿರಬೇಕು,**<br><br>• ಸದರಿ ಯೋಜನೆಯಡಿ ತರಬೇತಿಯನ್ನು ಪಡೆಯಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ 2018-19 ನೇ ಸಾಲಿನಲ್ಲಿ ಒಂದು ನೂರ ದಿನ ಕೆಲಸವನ್ನು ಮಾಡಿರಬೇಕು.<br><br>18 ರಿಂದ 45 ವಯೋಮಾನದವರಾಗಿರಬೇಕು, ಕನಿಷ್ಠ 7ನೇ ತರಗತಿವರಿಗೆ ಓದಿರಬೇಕು, ಆಧಾರ ಕಾರ್ಡ್ ಮತ್ತು ಬಿ.ಪಿ.ಎಲ್ ಕಾರ್ಡ್ ಹೊಂದಿರಬೇಕು.<br><br>**<u>ಸಿಡಾಕ್</u>**<br><br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ರಾಜ್ಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು<br>2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು<br>3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು<br>4. ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು<br><br>ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಆಸಕ್ತ 18 ವರ್ಷ ಮೀರಿದ ನಿರುದ್ಯೋಗ ಯುವಕ/ಯುವತಿಯರನ್ನು ಪತ್ರಿಕಾ ಪ್ರಕಟಣೆ ಹಾಗೂ ಇತರೆ ಉದ್ಯಮಗಳ ಮೂಲಕ ಅರ್ಜಿಗಳನ್ನು ಅಹ್ವಾನಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. |
| (ಅ) ಈ ಯೋಜನೆ/ಕಾರ್ಯಕ್ರಮಗಳಿಂದ ಉದ್ಯೋಗ ಸೃಷ್ಟಿಗೆ ಅವಕಾಶ ಒದಗಿಸಲಾಗಿದೆಯೇ;<br>(ಸಂಪೂರ್ಣ ವಿವರ ನೀಡುವುದು) | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೌಶಲ್ಯ ಮಿಷನ್)</u>**<br>ಹೌದು, ತರಬೇತಿ ಪಡೆದ ಶೇ70%ರಷ್ಟು ಯುವಜನರಿಗೆ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ ವರ್ಚುಯಲ್ ಜಾಬ್ ಮೇಳ ಹಾಗೂ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಮಿನಿ ಉದ್ಯೋಗ ಮೇಳಗಳನ್ನು ಏರ್ಪಡಿಸಿ ಕೌಶಲ್ಯ ಸಂಪರ್ಕ (Skill Connect Portal) ಮುಖಾಂತರ ಅನ್ ಲೈನ್‌ನಲ್ಲಿ ನೋಂದಣಿಯಾದ ಉದ್ಯೋಗಕಾಂಕ್ಷಿಗಳನ್ನು ಹಾಗೂ ಉದ್ಯೋಗಧಾತರನ್ನು ಒಂದೆಡೆ ಸೇರಿಸಿ ಉದ್ಯೋಗ ಅವಕಾಶ ಒದಗಿಸಲು ಕಾರ್ಯೋನ್ಮುಖವಾಗಿದೆ.<br><br>**<u>ಡೇ-ನಲ್ಮ್</u>**<br>ಡೇ-ನಲ್ಮ್ ಅಭಿಯಾನದಡಿ ಉದ್ಯೋಗ ಸೃಷ್ಟಿಗೆ ಅವಕಾಶ ಇರುವುದಿಲ್ಲ ಬದಲಾಗಿ, ಈ ಕೆಳಕಂಡಂತೆ ಅವಕಾಶಗಳು ಇರುತ್ತವೆ.<br>**1) ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ**<br>ಉಪಘಟಕದಡಿ ತರಬೇತಿಯನ್ನು ಪಡೆದುಕೊಂಡ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಸ್ವಯಂ ಉದ್ಯೋಗ ಮತ್ತು ವೇತನಾಧಾರಿತ ಉದ್ಯೋಗವನ್ನು ಒದಗಿಸಲಾಗುವುದು.<br><br>**2)ಸ್ವಯಂ ಉದ್ಯೋಗ ಕಾರ್ಯಕ್ರಮ**<br>ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುವುದು. |

## ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)

ಹೌದು. ಈ ಯೋಜನೆ/ ಕಾರ್ಯಕ್ರಮಗಳಿಂದ ಉದ್ಯೋಗ ಸೃಷ್ಟಿಗೆ ಅವಕಾಶ ನೀಡಲಾಗಿದೆ

| ಕ್ರ.ಸಂ. | ಯೋಜನೆ | ಜೀವನೋಪಾಯ ಉದ್ಯೋಗ ಸೃಷ್ಟಿಗೆ ಅವಕಾಶ ಪಡೆದವರ ವಿವರ |
|---|---|---|
| 1 | ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪು | 2658446 |
| 2 | ಡಿಡಿಯುಜಿಕೆವೈ | 45627 |
| 3 | ಆರ್‌ಸೆಟಿ | 328800 |

(ಇ) ಕಳೆದ 3 ವರ್ಷಗಳಲ್ಲಿ ಇಲಾಖಾ ವತಿಯಿಂದ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಬಿಡುಗಡೆಯಾದ ಮತ್ತು ಬಳಕೆ ಮಾಡಲಾದ ಅನುದಾನ ಎಷ್ಟು; (ಯೋಜನಾ/ಕಾರ್ಯಕ್ರಮವಾರು ವಿವರ ನೀಡುವುದು)

## ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೌಶಲ್ಯ ಮಿಷನ್)

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮಕ್ಕೆ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡ ಯೋಜನೆಗಳಿಗೆ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ.

**ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ :**

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ | ಬಿಡುಗಡೆಗೊಂಡ ಅನುದಾನ | ಬಳಕೆ ಮಾಡಲಾದ ಅನುದಾನ |
|---|---|---|---|
| 01 | 2019-20 | 7309.25 | 6077.78 |
| 02 | 2020-21 | 6541.75 | 6531.82 |
| 03 | 2021-22 (ಜನವರಿ -22 ರ ಅಂತ್ಯಕ್ಕೆ) | 5875 | 3415.73 |

**ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ :**

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ | ಬಿಡುಗಡೆಗೊಂಡ ಅನುದಾನ | ಬಳಕೆ ಮಾಡಲಾದ ಅನುದಾನ |
|---|---|---|---|
| 01 | 2019-20 | 800 | 494.42 |
| 02 | 2020-21 | 783.75 | 783.72 |
| 03 | 2021-22 (ಜನವರಿ -22 ರ ಅಂತ್ಯಕ್ಕೆ) | 496.09 | 415.66 |

## ಡೇ-ನಲ್ಮ್

ಕಳೆದ ಮೂರು ವರ್ಷಗಳಲ್ಲಿ ಡೇ-ನಲ್ಮ್ ಅಭಿಯಾನದಡಿ ಅನುಷ್ಠಾನಗೊಳಿಸಲಾದ ಕಾರ್ಯಕ್ರಮ ಮತ್ತು ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

## ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)

ಕಳೆದ 3 ವರ್ಷಗಳಲ್ಲಿ ಕೈಗೊಂಡಿರುವ ಯೋಜನೆಗಳಿಗೆ ಬಿಡುಗಡೆಯಾದ ಮತ್ತು ವೆಚ್ಚ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ

(ರೂ.ಲಕ್ಷಗಳಲ್ಲಿ)

| ಕ್ರಸ | ಯೋಜನೆ | 2019–20 | | 2020–21 | | 2021–22 | |
|---|---|---|---|---|---|---|---|
| | | ಬಿಡುಗಡೆ | ವೆಚ್ಚ | ಬಿಡುಗಡೆ | ವೆಚ್ಚ | ಬಿಡುಗಡೆ | ವೆಚ್ಚ |
| 1 | ಎನ್‌ಆರ್‌ಎಲ್‌ಎಂ | 22,559.46 | 20,309.32 | 30,249.36 | 26,169.38 | 40,909.36 | 36,901.92 |
| 2 | ಡಿಡಿಯುಜಿಕೆವೈ | - | 2,071.17 | - | 2,598.28 | - | 1,550.40 |
| 3 | ಆರ್‌ಸೆಟಿ | 263.19 | 424.32 | 723.46 | 245.29 | - | 66.84 |

## ಸಿಡಾಕ್

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)ದ ವತಿಯಿಂದ ಹಮ್ಮಿಕೊಂಡಿರುವ ಯೋಜನೆ/ಕಾರ್ಯಕ್ರಮಗಳು ಬಿಡುಗಡೆಯಾದ ಮತ್ತು ಬಳಕೆಯಾದ ಅನುದಾನದ ವಿವರಗಳು ಕೆಳಗಿನಂತಿವೆ

| ವರ್ಷ | ತರಬೇತಿ / ಕಾರ್ಯಕ್ರಮ ವಿವರ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) | ಬಳಕೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|---|
| 2018–19 | 1) ಒಂದು ದಿನದ ಔಟ್ ರೀಚ್ ಹಾಗೂ ಪ್ರೇರಣಾ ತರಬೇತಿ | 61.37 | 61.37 |
| | 2) ಎರಡು/ಮೂರು ದಿನಗಳ ದಿಶಾ ರೆಡಿ / ಸ್ಟಡಿ ಕಾರ್ಯಕ್ರಮ | 112.43 | 112.43 |
| | 3) ಅರು ದಿನಗಳ ವಸತಿಯುತ ದಿಶಾ ಗೋ ಕಾರ್ಯಕ್ರಮ | 27.37 | 27.37 |
| | 4) ಮೂರು ದಿನಗಳ ವಸತಿಯುತ ತರಬೇತಿ ಕಾರ್ಯಕ್ರಮ | 1.85 | 1.85 |
| | 5) ಆರು ದಿನಗಳ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 25.00 | 25.00 |
| | 6) ಆರು ದಿನಗಳ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 9.00 | 9.00 |
| | **ಒಟ್ಟು** | **237.02** | **237.02** |
| 2019–20 | 1) ಒಂದು ದಿನದ ಔಟ್ ರೀಚ್ ಹಾಗೂ ಪ್ರೇರಣಾ ತರಬೇತಿ | 7.50 | 7.50 |
| | 2) ಎರಡು/ಮೂರು ದಿನಗಳ ದಿಶಾ ರೆಡಿ / ಸ್ಟಡಿ ಕಾರ್ಯಕ್ರಮ | 22.50 | 22.50 |
| | 3) ಅರು ದಿನಗಳ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 180.00 | 180.00 |

| | | | |
|---|---|---|---|
| | 4) ಆರು ದಿನಗಳ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 25.00 | 25.00 |
| | 5) ಆರು ದಿನಗಳ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 9.00 | 9.00 |
| | **ಒಟ್ಟು** | **244.00** | **244.00** |

| | | | |
|---|---|---|---|
| 2020-21 | 1) ಆರು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 9.00 | 9.00 |
| | 2) ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು | 135.00 | 135.00 |
| | 3) ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ | 19.00 | 19.00 |
| | 4) ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ | 7.00 | 7.00 |
| | **ಒಟ್ಟು** | **170.00** | **170.00** |

(ಈ) ಈ ಯೋಜನೆ/ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು)

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೌಶಲ್ಯ ಮಿಷನ್)**

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ 80772 ಜನ ಫಲಾನುಭವಿಗಳಿಗೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯಡಿ 40827 ಜನ ಫಲಾನುಭವಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ.

**ಡೇ-ನಲ್ಮ್**

ಡೇ-ನಲ್ಮ್ ಅಭಿಯಾನದಡಿ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಂಡ ಫಲಾನುಭವಿಗಳ ವಿವರವನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (NRLM)**

**ತರಬೇತಿ ಪಡೆದು ಸದುಪಯೋಗ ಪಡಿಸಿಕೊಂಡ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ.**

| ಕ್ರ.ಸಂ. | ಯೋಜನೆ | ತರಬೇತಿ ಪಡೆದ ಫಲಾನುಭವಿಗಳ ವಿವರ | | |
|---|---|---|---|---|
| | | **2019-20** | **2020-21** | **2021-22** |
| 1 | ಎನ್‌ಆರ್‌ಎಲ್‌ಎಂ ಸ್ವಸಹಾಯ ಗುಂಪು | 434382 | 304486 | 181467 |

| | | | | |
|---|---|---|---|---|
| 2 | ಡಿಡಿಯುಜಿಕೆವೈ | 5797 | 769 | 2381 |
| 3 | ಆರ್‌ಸೆಟಿ | 24676 | 16333 | 15874 |

**ಸಿಡಾಕ್**

ಈ ಯೋಜನೆ / ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಂಡವರ ವಿವರ ಕೆಳಗಿನಂತಿವೆ.

| ವರ್ಷ | ತರಬೇತಿ ಪಡೆದವರ ಸಂಖ್ಯೆ |
|---|---|
| 2018-19 | 16491 |
| 2019-20 | 12703 |
| 2020-21 | 2308 |

(ಉ) ಕಟ್ಟಡ ಕಾರ್ಮಿಕರನ್ನು ಒಳಗೊಂಡಂತೆ ಇಂತಹ ಕಾರ್ಮಿಕರಿಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸೌಲಭ್ಯಗಳೇನು; (ವಿವರಗಳನ್ನು ನೀಡುವುದು)

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೌಶಲ್ಯ ಮಿಷನ್)**

ಕಟ್ಟಡ ಕಾರ್ಮಿಕರನ್ನು ಒಳಗೊಂಡಂತೆ ಇಂತಹ ಕಾರ್ಮಿಕರಿಗೆ ಪ್ರತ್ಯೇಕವಾಗಿ Recognition of Prior Learning (RPL)- ಪೂರ್ವ ಕಲಿಕೆ ಗುರುತಿಸುವಿಕೆಯಡಿ ತರಬೇತಿಯನ್ನು ನೀಡಿ ಪ್ರಮಾಣ ಪತ್ರ ನೀಡಲಾಗುತ್ತಿದೆ. ಮುಂದುವರೆದು ಕೋವಿಡ್-19 ರ ಸಾಂಕ್ರಾಮಿಕ ಬಿಕ್ಕಟಿನ ಸಮಯದಲ್ಲಿ 150 ವಲಸೆ ಕಾರ್ಮಿಕರಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, Domestic Data Entry Operator ಜಾಬ್‌ರೋಲ್ ನಡಿ ಹಾಗೂ Field Technician and Computer Peripherals ಜಾಬ್‌ರೋಲ್ ನಡಿ ತರಬೇತಿ ನೀಡಲಾಗಿದೆ.

ಮುಂದುವರೆದು ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೊಸೈಟಿ ರವರ ಸಹಯೋಗದೊಂದಿಗೆ ಆಶಾದೀಪ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳಾ ಅಭ್ಯರ್ಥಿಗಳಿಗೂ ಸಹ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡಲಾಗಿದೆ.

**ಡೇ-ನಲ್ಮ್**

ಡೇ-ನಲ್ಮ್ ಅಭಿಯಾನದಡಿ ಕಟ್ಟಡ ಕಾರ್ಮಿಕರಿಗಾಗಿ ಪ್ರತ್ಯೇಕವಾಗಿ ಯಾವುದೇ ಸೌಲಭ್ಯಗಳನ್ನು ನೀಡಲಾಗುತ್ತಿಲ್ಲ. ಬದಲಾಗಿ ಸದರಿ ರವರು ನಗರದ ಬಡವರಾಗಿದ್ದರೆ ಡೇ-ನಲ್ಮ್ ಅಭಿಯಾನದಡಿ ಸದರಿ ಪ್ರಶ್ನೆಯ ಕ್ರಮ ಸಂಖ್ಯೆ (ಅ) ರಲ್ಲಿ ವಿವರಿಸಿರುವ ಸೌಲಭ್ಯಗಳನ್ನು ಮಾತ್ರ ಪಡೆದುಕೊಳ್ಳಲು ಅವಕಾಶವಿರುತ್ತದೆ.

(ಊ) ಕಳೆದ 3ವರ್ಷಗಳಲ್ಲಿ ಇಲಾಖೆಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; ಇದನ್ನು ಯಾವ ಯಾವ ಉದ್ದೇಶಗಳಿಗೆ ಬಳಕೆ ಮಾಡಲಾಗಿದೆ? (ಉದ್ದೇಶವಾರು ವಿವರ ನೀಡುವುದು)

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೌಶಲ್ಯ ಮಿಷನ್)**

ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮಕ್ಕೆ ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಒಟ್ಟಾರೆ ಅನುದಾನದ ವಿವರ ಈ ಕೆಳಕಂಡಂತೆ ಇದೆ.

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ವರ್ಷ | ಬಿಡುಗಡೆಗೊಂಡ ಒಟ್ಟಾರೆ ಅನುದಾನ |
|---|---|---|
| 01 | 2019-20 | 9510.32 |
| 02 | 2020-21 | 11148.29 |
| 03 | 2021-22 (ಜನವರಿ-22 ರ ಅಂತ್ಯಕ್ಕೆ) | 21446.34 |

ಸದರಿ ಯೋಜನೆಯಡಿ ತರಬೇತಿ ಸಂಸ್ಥೆಗಳಿಗೆ ತರಬೇತಿ ವೆಚ್ಚವನ್ನು ನಿಯಮಾನುಸಾರ ಅನುಪಾತದನ್ವಯ ಬಿಡುಗಡೆಗೊಳಿಸಲಾಗಿರುತ್ತದೆ. ಅದರಂತೆ ಜಿಲ್ಲಾ ಕೌಶಲ್ಯಾಬಿವೃದ್ಧಿ ಅಧಿಕಾರಿಗಳ ಕಛೇರಿಯ ಆಡಳಿತಾತ್ಮಕ ವೆಚ್ಚವನ್ನು ಒಳಗೊಂಡಂತೆ ವಿವಿಧ ಯೋಜನೆಗಳ ಜಾರಿಗೆ ಸದರಿ ಅನುದಾನವನ್ನು ಹಂಚಿಕೆಗೊಳಿಸಲಾಗಿದೆ.

## ಡೇ-ನಲ್ಮ್

ಕಳೆದ 3 ವರ್ಷಗಳಲ್ಲಿ ಸರ್ಕಾರದಿಂದ ಡೇ-ನಲ್ಮ್ ಅಭಿಯಾನಕ್ಕೆ ಬಿಡುಗಡೆಯಾದ ಅನುದಾನ ವಿವರ ಈ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ಬಿಡುಗಡೆಯಾದ ಮೊತ್ತ |
|---|---|---|
| 1 | 2018-19 | 0 |
| 2 | 2019-20 | 2742.70 |
| 3 | 2020-21 | 5345.03 |
| | **ಒಟ್ಟು** | **8087.73** |

ಮೇಲ್ಕಂಡಂತೆ ಬಿಡುಗಡೆಯಾದ ಅನುದಾನವನ್ನು ಈ ಕೆಳಕಂಡ ಅಭಿಯಾನದ ಉದ್ದೇಶಗಳಿಗೆ ಬಿಡುಗಡೆ ಮಾಡಲಾಗಿದೆ.

**1) ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ**

ಸದರಿ ಉಪಘಟಕದಡಿ ಬಿಡುಗಡೆಯಾದ ಅನುದಾನವನ್ನು ಸ್ವ-ಸಹಾಯ ಸಂಘ ಮತ್ತು ಒಕ್ಕೂಟಗಳಿಗೆ ಆವರ್ತಕ ನಿಧಿ, ದಾಖಲಾತಿ, ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ, ಕ್ಷೇತ್ರ ಭೇಟಿ, ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಹಾಗೂ ಸಂಶೋಧನೆ ಮತ್ತು ಅಧ್ಯಯನಗಳಿಗೆ ಅನುದಾನವನ್ನು ಬಳಕೆ ಮಾಡಲಾಗಿದೆ.

**2) ಸ್ವಯಂ ಉದ್ಯೋಗ ಕಾರ್ಯಕ್ರಮ:**

ಸದರಿ ಉಪಘಟಕದಡಿ ಬಿಡುಗಡೆಯಾದ ಅನುದಾನವನ್ನು ವೈಯಕ್ತಿಕ, ಗುಂಪು ಕಿರು ಉದ್ದಿಮೆ ಮತ್ತು ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಬಡ್ಡಿ ಸಹಾಯಧನ, ಹೆಚ್ಚುವರಿ ಬಡ್ಡಿ ಸಹಾಯಧನ, ಬ್ಯಾಂಕರುಗಳಿಗೆ ತರಬೇತಿ, ಉದ್ಯಮಶೀಲತಾ ತರಬೇತಿಗಳಿಗೆ ವಿನಿಯೋಗಿಸಿಕೊಳ್ಳಲಾಗಿದೆ.

**3)ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:**

ಸದರಿ ಉಪಘಟಕದಡಿ ಬಿಡುಗಡೆಯಾದ ಅನುದಾನವನ್ನು ನಗರದ ನಿರುದ್ಯೋಗ ಯುವಕ/ಯುವತಿಯರಿಗೆ ತರಬೇತಿ ಆಯೋಜಿಸಿರುವ ಬಗ್ಗೆ ತರಬೇತಿ ಸಂಸ್ಥೆಗಳಿಗೆ ತರಬೇತಿ ಶುಲ್ಕ, ಪ್ರಮಾಣೀಕರಣ ಮತ್ತು ಮೌಲ್ಯ ಮಾಪನ ಸಂಸ್ಥೆಗಳಿಗೆ ಪ್ರಮಾಣೀಕರಣ ಮತ್ತು ಮೌಲ್ಯ ಮಾಪನ ಶುಲ್ಕ, ಬೀದಿ ವ್ಯಾಪಾರಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ, ಸಂಶೋಧನೆ ಮತ್ತು ಅಧ್ಯಯನ, ಉಧ್ಯಮಶೀಲತಾ ತರಬೇತಿ ಮುಂತಾದ ಉದ್ದೇಶಿತ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗಿದೆ.

**4)ನಗರದ ವಸತಿ ರಹಿತರಿಗೆ ಆಶ್ರಯ:**

ಸದರಿ ಉಪಘಟಕದಡಿ ಬಿಡುಗಡೆಯಾದ ಅನುದಾನವನ್ನು ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆ, ಆಶ್ರಯ ನಿರ್ವಹಣೆ, ಆಶ್ರಯ ನವೀಕರಣ, ಒಂದು ಬಾರಿ ಮೂಲಭೂತ ಸೌಲಭ್ಯ, ಹೊಸ ಆಶ್ರಯ ಕಟ್ಟಡ, ಅಧ್ಯಯನ ಮತ್ತು ಸಂಶೋಧನೆ, ಸ್ವತಂತ್ರ ನಿಷ್ಪಕ್ಷಪಾತ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಗೌರವಧನ, ಅರಿವು ಕಾರ್ಯಕ್ರಮ, ತರಬೇತಿ ಮುಂತಾದ ಉದ್ದೇಶಿತ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗಿದೆ.

**5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:**

ಸದರಿ ಉಪಘಟಕದಡಿ ಬಿಡುಗಡೆಯಾದ ಅನುದಾನವನ್ನು ನಗರದ ಬೀದಿ ವ್ಯಾಪಾರಸ್ಥರನ್ನು ಸಮೀಕ್ಷೆ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರ ವಿತರಣೆ, ಮಾರಾಟ ವಲಯ, ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ, ಪಟ್ಟಣ ಮಾರಾಟ ಸಮಿತಿ ಚುನಾವಣೆ ಮುಂತಾದ ಉದ್ದೇಶಿತ ಕಾರ್ಯಕ್ರಮಗಳಿಗೆ ಬಳಕೆ ಮಾಡಲಾಗಿದೆ.

| | **ಸಿಡಾಕ್**<br><br>ಕಳೆದ ಮೂರು ವರ್ಷಗಳಲ್ಲಿ ಸಿಡಾಕ್‌ಗೆ ಬಿಡುಗಡೆಯಾದ ಅನುದಾನ ಹಾಗೂ ಬಳಕೆ ಉದ್ದೇಶಗಳು ಈ ಕೆಳಗಿನಂತಿವೆ. |
|---|---|

| ವರ್ಷ | ಉದ್ದೇಶ | ಬಿಡುಗಡೆಯಾದ ಅನುದಾನ (ರೂ. ಲಕ್ಷಗಳಲ್ಲಿ) |
|---|---|---|
| 2018-19 | ಆಡಳಿತಾತ್ಮಕ ಹಾಗೂ ಇತರೆ | 320.59 |
| | ಕಾರ್ಯಕ್ರಮದ ವೆಚ್ಚಗಳು | 578.41 |
| | **ಒಟ್ಟು** | **899.00** |
| 2019-20 | ಆಡಳಿತಾತ್ಮಕ ಹಾಗೂ ಇತರೆ | 351.95 |
| | ಕಾರ್ಯಕ್ರಮದ ವೆಚ್ಚಗಳು | 548.05 |
| | **ಒಟ್ಟು** | **900.00** |
| 2020-21 | ಆಡಳಿತಾತ್ಮಕ ಹಾಗೂ ಇತರೆ | 530.00 |
| | ಕಾರ್ಯಕ್ರಮದ ವೆಚ್ಚಗಳು | 170.00 |
| | **ಒಟ್ಟು** | **700.00** |

**ಸಂಖ್ಯೆ: ಕೌಉಜೀಇ 02 ಕೌಗುಪ್ರ 2022**

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ, ಐಟಿ-ಬಿಟಿ ವಿಜ್ಞಾನ ಮತ್ತು
ತಂತ್ರಜ್ಞಾನ, ವಿದ್ಯುನ್ಮಾನ ಮತ್ತು
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.

## ಅನುಬಂಧ-1

## ದೀನದಯಾಳ್ ಅಂತ್ಯೋದಯ ಯೋಜನೆ – ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ :

### ಯೋಜನೆಯ ಹಿನ್ನಲೆ:

- ಕೇಂದ್ರ ವಸತಿ ಮತ್ತು ನಗರ್ ಬಡತನ ನಿರ್ಮೂಲನ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ರವರು ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯನ್ನು ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ ಯೋಜನೆಯೆಂದು ಮರುನಾಮಕರಣ ಮಾಡಿ 2014-15ನೇ ಸಾಲಿನಿಂದ ಅನುಷ್ಠಾನಗೊಳಿಸಲು ಆದೇಶವನ್ನು ಹೊರಡಿಸಿರುತ್ತಾರೆ. ಸದರಿ ಯೋಜನೆಯು ರಾಜ್ಯದ 35 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿತ್ತು. ಬಾಕಿ ಉಳಿದ 179 ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಲ್ಮ್ ಮಾದರಿಯಲ್ಲಿಯೇ ನಲ್ಮ್-ರಾಜ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.
- 2016-17ನೇ ಸಾಲಿನಲ್ಲಿ ನಲ್ಮ್ ಯೋಜನೆಯನ್ನು ದೀನದಯಾಳ್ ಅಂತ್ಯೋದಯ ನಲ್ಮ್ ಅಭಿಯಾನ ಎಂದು ಮರುನಾಮಕರಣ ಮಾಡಿ 271 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸುವಂತೆ ಆದೇಶವನ್ನು ಹೊರಡಿಸಿರುತ್ತಾರೆ.
- ರಾಜ್ಯದಲ್ಲಿ ಡೇ-ನಲ್ಮ್ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ಕಾರದಿಂದ ದಿನಾಂಕ:01.10.2016ರಂದು ಆದೇಶವನ್ನು ಹೊರಡಿಸಿರುತ್ತಾರೆ.

### ಯೋಜನೆಯ ಉದ್ದೇಶ:-

- ನಗರದ ಬಡಜನರನ್ನು ಬಡತನ ರೇಖೆಯಿಂದ ಮೇಲೆ ತರುವುದು.
- ನಗರ ಪ್ರದೇಶದ ಮಹಿಳಾ ಸ್ವ-ಸಹಾಯ ಸಂಘ, ನಗರ/ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಮತ್ತು ಸದಸ್ಯರ ಸಬಲೀಕರಣ.
- ನಗರದ ನಿರುದ್ಯೋಗ ಯುವಕ ಯುವತಿಯರಿಗೆ ಉಚಿತವಾಗಿ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿಗಳನ್ನು ನೀಡುವುದು.
- ನಗರ ಪ್ರದೇಶದಲ್ಲಿನ ಬಡವರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆಯನ್ನು ಸ್ಥಾಪಿಸಲು ಬ್ಯಾಂಕುಗಳಿಂದ ಸಾಲ ಮತ್ತು ಬಡ್ಡಿ ಸಹಾಯಧನವನ್ನು ಒದಗಿಸುವುದು.
- ನಗರ ಪ್ರದೇಶದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ವಿತರಣೆ ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.
- ನಗರ ಪ್ರದೇಶದ ವಸತಿ ರಹಿತರಿಗೆ 24x7 ವಸತಿ ತಂಗುದಾಣವನ್ನು ಒದಗಿಸುವುದು.

ಯೋಜನೆಯ ಫಲಾನುಭವಿಗಳು :-

- ನಗರದ ಬಡ ವರ್ಗದ ಜನರು – ನಗರದ ವಸತಿ ರಹಿತರು – ನಗರದ ಬೀದಿ ಬದಿ ವ್ಯಾಪಾರಸ್ಥರು – ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರು –ಮಹಿಳೆಯರು–ಅಲ್ಪಸಂಖ್ಯಾತರು–ವಿಕಲಚೇತನರು ಈ ಯೋಜನೆಯ ಮುಖ್ಯ ಫಲಾನುಭವಿಗಳಾಗಿರುತ್ತಾರೆ.

ರಾಜ್ಯದ ಡೇ-ನಲ್ಮ್ ಯೋಜನೆಯನ್ನು ಅನುಷ್ಠಾನಗೊಳಿಸಲು ಆಯ್ಕೆ ಮಾಡಿಕೊಂಡ ನಗರಗಳು:-

- ರಾಜ್ಯದ 11 ಮಹಾನಗರ ಪಾಲಿಕೆ, 57 ನಗರಸಭೆ, 113 ಪುರಸಭೆ ಮತ್ತು 90 ಪಟ್ಟಣ ಪಂಚಾಯಿತಿಗಳನ್ನೊಳಗೊಂಡು ಒಟ್ಟು 271 ನಗರ / ಪಟ್ಟಣ ಪ್ರದೇಶಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಯೋಜನೆಯ ಘಟಕಾಂಶಗಳ ವಿವರ :-


1. ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ :


   - ನಗರದ ಬಡವರ ಮುಖ್ಯವಾಗಿ, ಮಹಿಳೆಯರ ಸ್ವ-ಸಹಾಯ ಸಂಘ, ಪ್ರದೇಶ / ನಗರ ಮಟ್ಟದ ಒಕ್ಕೂಟಗಳ ರಚನೆ.
   - ಪ್ರತಿ ಸ್ವ-ಸಹಾಯ ಸಂಘಕ್ಕೆ ರೂ.10,000/- ಹಾಗೂ ಪ್ರದೇಶ ಮಟ್ಟದ ಒಕ್ಕೂಟಕ್ಕೆ ರೂ.50,000/- ಆವರ್ತಕ ನಿಧಿಯ ವಿತರಣೆ.
   - ರಚಿಸಲ್ಪಟ್ಟ ಸ್ವ-ಸಹಾಯ ಸಂಘಗಳಿಗೆ ಬ್ಯಾಂಕುಗಳಿಂದ ರೂ.1,00,000/-ದವರೆಗೆ ಸಾಲ ಮತ್ತು ಶೇ.7ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನ ವಿತರಣೆ ಹಾಗೂ ನಿಯಮಿತವಾಗಿ ಸಾಲ ಮರುಪಾವತಿಸುವ ಸ್ವ-ಸಹಾಯ ಸಂಘಗಳಿಗೆ ಶೇ.3ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ.
   - ಸ್ವ-ಸಹಾಯ, ಪ್ರದೇಶ/ನಗರ ಮಟ್ಟದ ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳ ಆಯೋಜನೆ.
   - ಒಕ್ಕೂಟಗಳ ಮೂಲಕ ಸ್ವ-ಸಹಾಯ ಸಂಘಗಳ ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಅವಶ್ಯಕತೆಗಳ ಪೂರೈಕೆ.



2. <u>ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ :</u>

- ಪ್ರತಿ ಫಲಾನುಭವಿಗೆ ರೂ.15,000/-ರವರೆಗೆ ತರಬೇತಿ ವೆಚ್ಚವನ್ನು ಭರಿಸಲಾಗುವುದು.
- ನಗರ ಪ್ರದೇಶದ ನಿರುದ್ಯೋಗ ಯುವಕ ಯುವತಿಯರಿಗೆ ಉದ್ಯೋಗಾಧರಿತ ಕೌಶಲ್ಯಾಭಿವೃದ್ಧಿ ತರಬೇತಿ.
- ವಿವಿಧ ಸರ್ಕಾರಿ ಸ್ವಾಮ್ಯದ ತರಬೇತಿ ಸಂಸ್ಥೆಗಳ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿಗಳ ಆಯೋಜನೆ.
- ಪ್ರತಿ ಫಲಾನುಭವಿಗೆ 3 ರಿಂದ 4 ತಿಂಗಳ ಉಚಿತ ಕೌಶಲ್ಯಾಭಿವೃದ್ಧಿ ತರಬೇತಿ.
- ತರಬೇತಿ ಪಡೆದ ಅಭ್ಯರ್ಥಿಗಳಿಗೆ ವೇತನಾಧರಿತ ಉದ್ಯೋಗ ಅಥವಾ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ.






3. <u>ಸ್ವಯಂ ಉದ್ಯೋಗ ಕಾರ್ಯಕ್ರಮ :</u>

- ನಗರ ನಿರುದ್ಯೋಗ ಯುವಕ ಯುವತಿಯರಿಗೆ ವೈಯಕ್ತಿಕ ಮತ್ತು ಗುಂಪು ಕಿರು ಉದ್ದಿಮೆ ಸ್ಥಾಪಿಸಲು ಸಹಾಯ.
- ವೈಯಕ್ತಿಕ ಕಿರು ಉದ್ದಿಮೆ ಸ್ಥಾಪಿಸಲು ರೂ.2.00 ಲಕ್ಷದವರೆಗೆ ಸಾಲ ಸೌಲಭ್ಯ.

➢ ಗುಂಪು ಕಿರು ಉದ್ದಿಮೆ ಸ್ಥಾಪಿಸಲು ರೂ.10,00,000/-ರವರೆಗೆ ಸಾಲ ಸೌಲಭ್ಯ.

➢ ಸಾಲದ ಮೊತ್ತಕ್ಕೆ ಶೇ.7ಕ್ಕಿಂತ ಮೇಲ್ಪಟ್ಟು ವಿಧಿಸುವ ಬಡ್ಡಿ ಸಹಾಯಧನ.




4. <u>ನಗರ ಬೀದಿ ಬದಿ ವ್ಯಾಪಾರಸ್ಥರಿಗೆ ಬೆಂಬಲ :</u>

➢ ಬೀದಿ ಬದಿ ವ್ಯಾಪಾರಸ್ಥರನ್ನು ಗುರುತಿಸುವಿಕೆ, ಗುರುತಿನ ಚೀಟಿ ವ್ಯವಸ್ಥೆ.

➢ ಮಾರಾಟ ಅಭಿವೃದ್ಧಿ ಯೋಜನೆ-ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಕಿರುಉದ್ದಿಮೆಗಳ ಸ್ಥಾಪನೆಗೆ ಸಹಾಯ.


➢ ಮಾರುಕಟ್ಟೆಯ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು ಪೂರೈಕೆ.

➢ Vending Plan ಮಾಡಲು ಆರ್ಥಿಕ ಸಹಾಯ.



5. <u>ನಗರದ ವಸತಿ ರಹಿತರಿಗೆ ಆಶ್ರಯ:</u>

- ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸುವಿಕೆ.
- ವಸತಿ ರಹಿತರಿಗೆ 24x7 ಆಶ್ರಯ ವ್ಯವಸ್ಥೆ ಕಲ್ಪಿಸುವುದು.
- ಮೂಲಭೂತ ಸೌಲಭ್ಯಗಳ ಲಭ್ಯತೆ.
- ವಸತಿ ರಹಿತರಿಗೆ ಇತರೆ ಸಾಮಾಜಿಕ ಭದ್ರತಾ ಯೋಜನೆಗಳ ಸೌಲಭ್ಯ.
- ಹೊಸ ಆಶ್ರಯ ಕಟ್ಟಡ ನಿರ್ಮಾಣ, ಆಶ್ರಯದ ನಿರ್ವಹಣೆ ಮತ್ತು ಆಶ್ರಯ ನವೀಕರಣ ಇತ್ಯಾದಿ., ಚಟುವಟಿಕೆಗಳಿಗೆ ಆರ್ಥಿಕ ಸಹಾಯ.



****

ಅನುಬಂಧ-1

2018-19 ರಿಂದ 2020-21ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಹಾಗೂ ಬಳಕೆ ಮಾಡಲಾದ ಅನುದಾನದ ವಿವರ

| ಕ್ರಸಂ | ಯೋಜನೆ | ವರ್ಷ | ಅನುದಾನ ಬಿಡುಗಡೆ | ಖರ್ಚಾದ ಅನುದಾನ | ಷರಾ |
|---|---|---|---|---|---|
| 1 | 2 | 3 | 4 | 5 | 6 |
| 1 | ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ಎನ್.ಯು.ಎಲ್.ಎಮ್ | 2018-19 | 0.00 | 5245.88 | ಹೆಚ್ಚುವರಿ ಖರ್ಚಾದ ಅನುದಾನವನ್ನು ಹಿಂದಿನ ಸಾಲಿನಲ್ಲಿ ಬಾಕಿ ಉಳಿದ ಅನುದಾನದಲ್ಲಿ ಬಳಕೆ ಮಾಡಿಕೊಳ್ಳಲಾಗಿದೆ. |
| 2 | | 2019-20 | 2742.70 | 3888.83 | |
| 3 | | 2020-21 | 5345.03 | 4158.58 | |
| | | **Total** | **8087.73** | **13293.29** | |

# ಅನುಬಂಧ-2

<table>
<tr><th>ಕ್ರ. ಸಂ</th><th>ಉಪಘಟಕದ ಹೆಸರು</th><th>ಸಾಧನೆ</th></tr>
<tr><td>1</td><td>ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ</td><td>
<table>
<tr><th>ವರ್ಷ</th><th>ಪ್ರಯೋಜನ ಪಡೆದ ಸ್ವ-ಸಹಾಯ ಸಂಘಗಳ ಸಂಖ್ಯೆ</th></tr>
<tr><td>2018-19</td><td>2383</td></tr>
<tr><td>2019-20</td><td>1891</td></tr>
<tr><td>2020-21</td><td>1107</td></tr>
</table>
</td></tr>
<tr><td>2</td><td>ಸ್ವಯಂ ಉದ್ಯೋಗ ಕಾರ್ಯಕ್ರಮ</td><td>
<table>
<tr><th>ವರ್ಷ</th><th>ವೈಯಕ್ತಿಕ ಕಿರು ಉದ್ದಿಮೆ</th><th>ಗುಂಪು ಕಿರು ಉದ್ದಿಮೆ</th><th>ಎಸ್‌ಹೆಚ್‌ಜಿ ಬ್ಯಾಂಕ್‌ಕ್ರೆಡಿಟ್ ಲಿಂಕೇಜ್</th></tr>
<tr><td>2018-19</td><td>2427</td><td>89</td><td>427</td></tr>
<tr><td>2019-20</td><td>1194</td><td>105</td><td>672</td></tr>
<tr><td>2020-21</td><td>989</td><td>50</td><td>316</td></tr>
</table>
</td></tr>
<tr><td>3</td><td>ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ</td><td>
<table>
<tr><th>ವರ್ಷ</th><th>ತರಬೇತಿಯನ್ನು ಪಡೆದ ಫಲಾನುಭವಿಗಳ ಸಂಖ್ಯೆ</th></tr>
<tr><td>2018-19</td><td>3038</td></tr>
<tr><td>2019-20</td><td>4849</td></tr>
<tr><td>2020-21</td><td>5732</td></tr>
</table>
</td></tr>
<tr><td>4</td><td>ನಗರದ ವಸತಿ ರಹಿತರಿಗೆ ಆಶ್ರಯ</td><td>
<table>
<tr><th>ವರ್ಷ</th><th>ಆಶ್ರಯವನ್ನು ಪಡೆದ ವಸತಿ ರಹಿತರ ಸಂಖ್ಯೆ</th></tr>
<tr><td>2018-19</td><td>1440</td></tr>
<tr><td>2019-20</td><td>1900</td></tr>
<tr><td>2020-21</td><td>1986</td></tr>
</table>
</td></tr>
<tr><td>5</td><td>ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ</td><td>
<table>
<tr><th>ವರ್ಷ</th><th>ಗುರುತಿಸಲ್ಪಟ್ಟ ಬೀದಿ ವ್ಯಾಪಾರಿಗಳ ಸಂಖ್ಯೆ</th></tr>
<tr><td>2018-19</td><td>21409</td></tr>
<tr><td>2019-20</td><td>44946</td></tr>
<tr><td>2020-21</td><td>17357</td></tr>
</table>
</td></tr>
</table>